



ಯಶಸ್ಸಿನ ‘ಸಾಹಿತ್ಯ’ ಬರೆದ ಬೈಲಹೊಂಗಲದ ಹುಡುಗಿಯ ಗೆಲುವಿನ ನಗು



ಡಿ.ಎಚ್. ವಿನಯ್‌ಕುಮಾರ್ ಅವರ ಕನಸು ನನಸಾದ ಕ್ಷಣ



ಮಹಮ್ಮದ್ ಸುಮೈದ್



ಅವಿನಾಶ್




ಅಪೂರ್ವ ಬಾಸೂರು

ಲೆಕ್ಕವಿಲ್ಲ. ಬಡತನದ ನಡುವೆಯೂ ಅವರ ತಂದೆ, ಅವರನ್ನು ಪಾವಗಡದ ಸರ್ಕಾರಿ ಕಾಲೇಜಿಗೆ ಸೇರಿಸಿದ್ದರು. ಆ ದಿನಗಳಲ್ಲಿ ಕಾಲೇಜಿನ ಪ್ರವೇಶ ಧನವಾಗಿದ್ದ 630 ರೂಪಾಯಿಯನ್ನು ಹೊಂದಿಸುವುದೇ ಈ ಕುಟುಂಬಕ್ಕೆ ಕಷ್ಟವಾಗಿತ್ತು. ಸಂಬಂಧಿಗಳ ಮನೆಯಲ್ಲಿ ಸ್ವಲ್ಪ ದಿನ ಇದ್ದು, ಆಮೇಲೆ ಹಾಸ್ಟೆಲ್‌ನಲ್ಲಿ ಪ್ರವೇಶ ಪಡೆದು ಅರುಣಾ ಅವರು ಪಿಯುಸಿ ಮುಗಿಸಿದಾಗ ಎಂಜಿನಿಯರಿಂಗ್ ಸೀಟು ಒಲಿದುಬಂತು.

ತಂದೆ 2009ರಲ್ಲಿ ಕೊನೆಯುಸಿರೆಳೆದಾಗ ಅರುಣಾ ಅವರ ಅಮ್ಮ ವಿಮಲಾಕ್ಷಿ ಅವರೇ ಮನೆತನದ ಕೃಷಿ ಚಟುವಟಿಕೆಗಳ ಹೊಣೆಹೊತ್ತರು. ಆದರೆ, ಕುಟುಂಬದ ಬದುಕು ಸಾಗಿಸುವುದು ತುಂಬಾ ಕಷ್ಟವಾಗಿತ್ತು. ಅಮ್ಮನ ಕೆಲಸಗಳಲ್ಲಿ ಅರುಣಾ ಕೂಡ ಸಾಥ್ ನೀಡಿದರು. ಸರ್ಕಾರಿ ಯೋಜನೆಗಳಿಗೂ ಗ್ರಾಮೀಣ ಜನರಿಗೂ ನಡುವೆ ಸಂಪರ್ಕ ಕೊಂಡಿಯೇ ಇಲ್ಲದೆ, ಯೋಜನೆಗಳು ಫಲಾನುಭವಿಗಳನ್ನು ತಲುಪದೆ ಹೇಗೆ ನಿರರ್ಥಕವಾಗುತ್ತಿವೆ ಎನ್ನುವ ಸಂಗತಿ ಅರುಣಾ ಅವರಿಗೆ ಆ ವೇಳೆಗಾಗಲೇ ಮನದಟ್ಟು ಆಗಿತ್ತು. ಆ ಅಂತರವನ್ನು ಹೋಗಲಾಡಿಸಿ, ರೈತರ ಮುಖದಲ್ಲಿ ಒಂದು ನೆಮ್ಮದಿಯ ಗೆರೆ ಮೂಡಿಸಬೇಕು ಎಂಬ ಹಂಬಲವೂ ಅವರ ಜತೆಗೂಡಿತು. ಅರುಣಾ ಅವರ ಸಾಧನೆಗೆ ಇಷ್ಟು ಸಾಕಾಗಿತ್ತು.

ಅರುಣಾ ಅವರು ಮೊದಲ ನಾಗರಿಕ ಸೇವಾ ಪರೀಕ್ಷೆಯನ್ನು ಬರೆದಿದ್ದು 2014ರಲ್ಲಿ. ಪರೀಕ್ಷೆಗೆ ತಾವು ಸಿದ್ಧವಾಗುತ್ತಲೇ ಐಎಎಸ್ ಕೋಚಿಂಗ್ ಅಕಾಡೆಮಿಯಲ್ಲಿ ಅರೆಕಾಲಿಕ ಮಾರ್ಗದರ್ಶಕಿಯಾಗಿಯೂ ಅವರು ಕೆಲಸ ಮಾಡಿದರು. ಮುಂದೆ ‘ಅರುಣಾ ಐಎಎಸ್ ಅಕಾಡೆಮಿ’ಯನ್ನೂ ಆರಂಭಿಸಿದರು. ಗ್ರಾಮಾಂತರ ಭಾಗದ ಅಭ್ಯರ್ಥಿಗಳಿಗೇ ಹೆಚ್ಚಾಗಿ ತಮ್ಮ ಅಕಾಡೆಮಿಯಲ್ಲಿ ಕಲಿಕೆಗೆ ಅವಕಾಶ ನೀಡಿದರು. ‘ಗ್ರಾಮಾಂತರ ಭಾಗದ ಅಭ್ಯರ್ಥಿಗಳಿಗೆ ಉಚಿತ ಕೋಚಿಂಗ್ ಮತ್ತು ಸೌಲಭ್ಯ ಒದಗಿಸುವ ಮೂಲಕ ಸರ್ಕಾರ ಅವರ ನೆರವಿಗೆ ನಿಲ್ಲಬೇಕು’ ಎಂದು ಅರುಣಾ ಸಲಹೆ ನೀಡುತ್ತಾರೆ. ಗ್ರಾಮೀಣ ಭಾಗದ ಜನರಿಗೆ ಎಷ್ಟು ಸಾಧ್ಯವೋ ಅಷ್ಟು ಅನುಕೂಲ ಮಾಡಿಕೊಡುವ ಅಭಿಲಾಷೆಯನ್ನೂ ಅವರು ವ್ಯಕ್ತಪಡಿಸುತ್ತಾರೆ.

## ಕ್ಲರ್ಕ್ ಹುದ್ದೆಯಿಂದ ಜಿಗಿತ

ಕೇರಳದ ಮಿನ್ನು ಅವರದೂ ಅಷ್ಟೇ ಸ್ಫೂರ್ತಿದಾಯಕ ಕಥೆ. ಪೊಲೀಸ್ ಆಗಿದ್ದ ತಂದೆ ಕರ್ತವ್ಯದಲ್ಲಿ ಇದ್ದಾಗಲೇ ತೀರಿಹೋಗಿದ್ದರಿಂದ ಸಹಾನುಭೂತಿಯಿಂದ ಮಿನ್ನು ಅವರನ್ನು ಕ್ಲಾರ್ಕ್ ಹುದ್ದೆಗೆ ನೇಮಕ ಮಾಡಲಾಗಿತ್ತು. ಪೂರ್ಣಾವಧಿ ಕೆಲಸ ಮಾಡುತ್ತಲೇ ನಾಗರಿಕ ಸೇವಾ ಪರೀಕ್ಷೆಗೆ ತಯಾರಿ ನಡೆಸಿ, ಯಶಸ್ಸು ಸಾಧಿಸಿದವರು ಈ ಮಿನ್ನು. ಅಷ್ಟೇ ಅಲ್ಲ, ಆಕೆ ಮಗುವಿನ ತಾಯಿ ಬೇರೆ. ಕೆಲಸದ ಒತ್ತಡ, ಸಂಸಾರದ ಹೊಣೆ ಯಾವುದೂ ಅವರ ಸಾಧನೆಗೆ ಅಡ್ಡಿಯಾಗಲಿಲ್ಲ. 2015ರಲ್ಲಿ ಪರೀಕ್ಷೆಗೆ ತಯಾರಿ ಆರಂಭಿಸಿದ ಅವರು, ಎರಡು ವರ್ಷಗಳ ಬಳಿಕ ಮುಖ್ಯ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರು. ಇದೀಗ 150ನೇ ರ್‍ಯಾಂಕ್ ಮೂಲಕ ಐಎಎಸ್ ಹುದ್ದೆಗೆ ಆಯ್ಕೆಯಾಗಿ ಮಿಂಚು ಹರಿಸಿದ್ದಾರೆ ಮಿನ್ನು.

‘ಅಪ್ಪನ ಸಾವಿನ ಸಹಾನುಭೂತಿಯಿಂದ ಕ್ಲಾರ್ಕ್ ಕೆಲಸ ಸಿಕ್ಕಾಗ ನನಗೆ ಗೊತ್ತಿತ್ತು, ನಾನು ನಿವೃತ್ತಿಯವರೆಗೆ ಮಾಡುವ ಕೆಲಸ ಇದಲ್ಲ ಎಂದು. ಹೀಗಾಗಿ ಯುಪಿಎಸ್‌ಸಿ ಪರೀಕ್ಷೆ ಬರೆಯಬೇಕು ಎಂದು ನಿರ್ಧರಿಸಿದ ಮೊದಲ ದಿನದಿಂದಲೇ ಕಠಿಣಶ್ರಮ ಹಾಕತೊಡಗಿದೆ’ ಎಂದು ಅವರು ಹೇಳುತ್ತಾರೆ. ‘ನಾನು ಪಡೆದ ಕೆಲಸ ಅಪ್ಪನದಾಗಿತ್ತೇ ವಿನಾ ನನ್ನದಾಗಿರಲಿಲ್ಲ. ಆ ಕೆಲಸವನ್ನು ಪಡೆಯಲು ನಾನು ಯಾವುದೇ ನೇಮಕಾತಿ ಪರೀಕ್ಷೆಯನ್ನು ಎದುರಿಸಿರಲಿಲ್ಲ. ಹೀಗಾಗಿ ನನ್ನ ಕೆಲಸವನ್ನು ನಾನೇ ಸಂಪಾದಿಸಲು ನಿರ್ಧರಿಸಿದ್ದೆ’ ಎಂದು ಆಕೆ ಹೇಳುವಾಗ, ತಾವು ಅಂದುಕೊಂಡಿದ್ದನ್ನು ಸಾಧಿಸಿದ ಹೆಮ್ಮೆ ಎದ್ದು ಕಾಣುತ್ತದೆ.

ಮಿನ್ನು ಅವರ ತಂದೆ ತೀರಿಹೋದಾಗ, ಆಕೆ ಹನ್ನೆರಡನೇ ತರಗತಿಯಲ್ಲಿ ಓದುತ್ತಿದ್ದರು.